Sri SANJEEVANATHA AIKALA (Suratkal).—I want to have some clarifications.

Mr. SPEAKER.—If the Member clarifies and exhausts his Questions it will not be in the best interest. I shall see that a copy of the statement is circulated to everybody by this evening or latest by Monday and on Monday we will have ample time for clarifications. This is a very important matter and members must study it and offer their constructive suggestions. I propose to give time for it on Monday.

Further, according to the rule it says that a Statement may be made with the consent of the Speaker but no questions shall be asked at the time the statement is made. Therefore, if I allow Sri Aikala to put question I will be violating this rule.

Sri S. NIJALINGAPPA (Chief Minister).—I request the members to come prepared and make constructive suggestions. On behalf of Government let me assure them that every consideration will be given to those suggestions. If they want to criticise Government, I have no objection but that can be done at some other time. Now when they ask question that should be something leading to some constructive suggestion.

NON-OFFICIAL RESOLUTION

re: Appointment of Commission to assess the Properties owned after 1947 by Ministers, etc.—(Contd.)

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯನಭಾಪತಿಯವರೇ, ಶ್ರೀಮಾನ್ ಕೇಶವಮೂರ್ತಿಯವರು ತಂದಿರತಕ್ಕ ನಿರ್ಣಯ ಬಹಳ ಉತ್ತಮವಾದಂಥ ನಿರ್ಣಯ. ದೇಶದ ಹಾಗೂ ಜನತೆಯ ಹಿತದೃಷ್ಟಿಯಿಂದ ಆ ನಿರ್ಣಯವನ್ನು ನಾನು ಈ ಸಂದರ್ಭದಲ್ಲಿ ಸ್ವಾಗತಿಸುತ್ತಿದ್ದೇನೆ.

ಸ್ವಾಮಿ, ಈ ನಿರ್ಣಯವಾದರೂ ಕೂಡ ಹೀಗೆ ಇದೆ: ಸರ್ಕಾರದ ಮಂತ್ರಿಗಳು, ಶಾಸಕರು, ಉನ್ನತಸ್ಥಾನದಲ್ಲಿರತಕ್ಕಂಥ ಅಧಿಕಾರಿಗಳು ತಮ್ಮ ಆಸ್ತಿಪಾಸ್ತಿಗಳ ಬಗೆಗೆ ಹಿಂದೆ ಇದ್ದ ಮತ್ತು ಈಗಿರುವ ಆಸ್ತಿಪಾಸ್ತಿಗಳ ಬಗೆಗೆ ತಾವು ತಮ್ಮ ಸ್ವಯಿಚ್ಛೆಯ ಪ್ರಕಾರ ಡಿಕ್ಲೇರ್ ಮಾಡಿಕೊಳ್ಳತಕ್ಕದ್ದು ಎಂದು ಈ ನಿರ್ಣಯದಲ್ಲಿ ಅಡಕವಾಗಿದೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಸ್ವತಂತ್ರಬಂದ ನಂತರ ಈ ರೀತಿಯ ಸನ್ನಿವೇಶಗಳಿಗೆ ಹೆಚ್ಚು ಎಡೆ ಕೊಟ್ಟಿದೆ—ಯೆಂದರೆ ತಪ್ಪಾಗಲಾರದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರ, ಅನೀತಿ ರೀತಿಯಲ್ಲಿ ಶಾಸಕರುಗಳು ಹಾಗೂ ಮಂತ್ರಿಗಳು ತಮ್ಮ ಆಸ್ತಿಪಾಸ್ತಿಗಳನ್ನು ಹೆಚ್ಚು ಮಾಡಿಕೊಂಡಿದ್ದಾರೆ. ಅನೀತಿಯಿಂದ, ಅಧರ್ಮದಿಂದ, ತಪ್ಪು ಮಾರ್ಗದಿಂದ ಎಂದು ಅವರ ನಿರ್ಣಯದಲ್ಲಿ ಸೂಚಿಸುತ್ತವೆ. ಈ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕೆ ಯಾರೇ ಆಗಿರಲಿ' ಅವರ ಆಸ್ತಿಪಾಸ್ತಿಗಳನ್ನು ಡಿಕ್ಲೇರ್ ಮಾಡಿಕೊಳ್ಳತಕ್ಕದ್ದು ಬಹಳ ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅವರು ನಿಷ್ಠೆಯಿಂದ ಇರುವುದಾದರೆ, ಸತ್ಯದಿಂದ ಇರುವುದಾದರೆ, ನ್ಯಾಯದಿಂದ ಇರುವುದಾದರೆ, ಅವರ ಆಸ್ತಿಯನ್ನು ನ್ಯಾಯವಾಗಿ ಸಂಪಾದನೆ ಮಾಡಿದ್ದೇ ಆದರೆ ಡಿಕ್ಲೇರ್ ಮಾಡಿಕೊಳ್ಳುವುದಕ್ಕೆ ಯಾರುಕೂಡ ಹಿಂಜರಿಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಯಾರ ಆಸ್ತಿಪಾಸ್ತಿಗಳು ಏನಿವೆ ಅವುಗಳನ್ನು ಡಿಕ್ಲೇರ್ ಮಾಡಿಕೊಳ್ಳುವುದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಸ್ವತಂತ್ರಬಂದ ನಂತರ ಕೋಟ್ಯಾ ಮಾಲೀಕರುಗಳು ಅಪಾಮಾರ್ಗದಲ್ಲಿ, ಅನ್ಯಾಯದಲ್ಲಿ ನಡೆಯುತಕ್ಕಂಥ ಅನೇಕ ಮುಂದಾಳುಗಳು ಇದ್ದಾರೆ. ಸಮಾಜದಲ್ಲಿ ಒಳ್ಳೆಯ ಮುಂದಾಳುಗಳ ಘನತೆ ಗೌರವಗಳಿಗೆ ಚ್ಯುತಿ ಬರದಂತೆ ಸರ್ಕಾರ ಏರ್ಪಾಡು ಮಾಡಬೇಕು. ಇಲ್ಲದೇ ಹೋದರೆ, ದೇಶದಲ್ಲಿ ಸರ್ಕಾರದ ಬೊಕ್ಕಸವನ್ನು ಅನೇಕ ರೀತಿಯಿಂದ ಈ ಗುಂಡಾಗಳು ಮತ್ತು ದೇಶದ್ರೋಹಿಗಳು,

ಮತ್ತು ರಾಷ್ಟ್ರಪ್ರೋಹಿಗಳು ದೋಚಿ ಹಣವನ್ನು ಮಾಡುವುದಕ್ಕೆ ಮುಂದೆ ಬರುತ್ತಾರೆ. ಇದನ್ನು ತಪ್ಪಿಸತಕ್ಕದ್ದು ಸರ್ಕಾರದ ಕರ್ತವ್ಯ. ಇದನ್ನು ತಪ್ಪಿಸುವಂತೆ ಮಾಡಲು ವರ್ಷೇ ವರ್ಷೇ ಅಥವಾ ೫ ವರ್ಷಕ್ಕೊಮ್ಮೆಯಾದರೂ ಕೂಡ ತಮ್ಮ ಆಸ್ತಿಪಾಸ್ತಿಗಳನ್ನು, ತಮ್ಮ ಸಂಸಾರದಲ್ಲಿ ತಮ್ಮ ಮಗನ ಹೆಸರಿನಲ್ಲಿ, ಹೆಂಡತಿ ಹೆಸರಿನಲ್ಲಿ, ಇರತಕ್ಕ ಆಸ್ತಪಾಸ್ತಿಗಳನ್ನು, ಡಿಕ್ಲೇರ್ ಮಾಡಿಕೊಳ್ಳುವ ಒಂದು ವ್ಯವಸ್ಥೆ ಮಾಡಬೇಕು. ಮತ್ತು ಆಡಳಿತದಲ್ಲಿರತಕ್ಕ ಉನ್ನತ ಅಧಿಕಾರಿಗಳಾಗಲಿ,ೇ ಮಂತ್ರಿ ಮಂಡಲದಲ್ಲಿರತಕ್ಕ ಮಂತ್ರಿಗಳಾಗಲೀ ಶಾಸಕರಾಗಲೀ, ಅವರುಗಳು ಈ ರೀತಿ ಡಿಕ್ಲೇರ್ ಮಾಡಿ ಕೊಳ್ಳುವ ಹಾಗೆ ಒಂದು ಸೂಚನೆಯನ್ನು ಸರ್ಕಾರ ಕೊಡತಕ್ಕದ್ದು ಅತಿ ಮುಖ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ದ್ರೋಹಿಗಳ ಬಗ್ಗೆ ಕಠಿನವಾಗಿ ಸರ್ಕಾರ ವರ್ತಿಸತಕ್ಕದ್ದು ಬಹಳ ಅವಶ್ಯಕವಿದೆ. ಬಹುಭಾಗ ಸರ್ಕಾರದ ಬಾಲ ಬಡುಕರಾಗಿ ಮಂತ್ರಿಗಳ ಹಿಂಬಾಲಕರಾಗಿ ಸರ್ಕಾರದ ಹಾಗೂ ಜನತೆಯ ಆಸ್ತಿಪಾಸ್ತಿಂಥ ಈ ಹಣವನ್ನು ಹಾಗೂ ಅನೇಕ ರೀತಿಯಲ್ಲಿ ಸರ್ಕಾರ ವನ್ನು ದೋಚುತ್ತಿದ್ದಾರೆ. ಇದೆಲ್ಲವೂ ಕಡಿಮೆಯಾಗಬೇಕು. ಕೇವಲ ಆಡಳಿತದ ಅಧಿಕಾರದಲ್ಲಿರತಕ್ಕ, ಸರ್ಕಾರದ ಹಿಂಬಾಲಕರಾಗಿ ಕಾಂಗ್ರೆಸ್ಸಿನ ಹಿಂಬಾಲಕರಾಗಿ ಅನೇಕ ರೀತಿಯಲ್ಲಿ ಹಣ ದೋಚ ತಕ್ಕದ್ದು ಒಂದು ಸರ್ವಸಾಮಾನ್ಯವಾದ ಮಾರ್ಗವಾಗಿದೆ. ಈ ಅಪಮಾರ್ಗವನ್ನು ಅನ್ಯಾಯ ಮಾರ್ಗವನ್ನು ಕಡಿಮೆ ಮಾಡಿ ದೇಶದ ಜನತೆ ನೆಮ್ಮದಿಯಾಗಿರುವಂತೆ ಸರ್ಕಾರ ಮಾಡಬೇಕು. ತನ್ಮೂಲಕ ದೇಶದ ಏಳಿಗೆಗೆ ಅವಕಾಶವಾಗುವಂತೆ ಆಗಬೇಕು. ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಯಾರೇ ಆಗಿರಲಿ, ವಿರೋಧಪಕ್ಷದವರೇ ಆಗಿರಲಿ, ಆಡಳಿತ ಪಕ್ಷದವರೇ ಆಗಿರಲಿ, ಉನ್ನತ ಮಟ್ಟದಲ್ಲಿರುವ ಅಧಿಕಾರಿಗಳೇ ಆಗಿರಲಿ, ಮಂತ್ರಿಗಳೇ ಆಗಿರಲಿ, ಎಲ್ಲರೂ ಸಹ ತಮ್ಮ ತಮ್ಮ ಆಸ್ತಿ ಪಾಸ್ತಿಗಳನ್ನು ಡಿಕ್ಲೇರ್ ಮಾಡಿಕೊಳ್ಳಬೇಕು ಎನ್ನುವ ಒಂದು ಒತ್ತಾಯವನ್ನು ತರ ತಕ್ಕದ್ದು ಸರ್ಕಾರದ ಪ್ರಮುಖ ಕರ್ತವ್ಯವೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಸನ್ಮಾನ್ಯ ಶ್ರೀಮಾನ್ ಕೇಶವಮೂರ್ತಿಯವರು ಹೇಳಿದ್ದಲ್ಲಿ ಬಹಳ ಕೊಳಕು ಲಂಚರುಷುವತ್ತುಗಳು ಇವೆ. ಅನ್ಯಾಯಗಳು ನಡೆಯುತ್ತಿವೆ. ಅಕ್ಷಮ್ಯ ರೀತಿಯಲ್ಲಿ ಜನಗಳು, ಅಂದರೆ, ಸರ್ಕಾರದ ಹೊರಗೆ ಇದ್ದವರು, ಒಳಗೆ ಇದ್ದವರು ನಡೆಯುತ್ತಿದ್ದಾರೆ, ಮುಖ್ಯ ವಾಗಿ ಮಂತ್ರಿಗಳು, ಶಾಸಕರುಗಳು, ಇವರ ವಿಚಾರದಲ್ಲಿ ಒಂದು ಕಮೀಷನ್ ನೇಮಕ ಮಾಡ ಬೇಕೆಂದು ಒಂದು ನಿರ್ಣಯ ತಂದಿದ್ದಾರೆ. ಇದು ಕಾರ್ಯತಃ ಸಾಧ್ಯವಾಗದ ಮಾತು. ಕಮೀಷನ್ ನೇಮಕ ಮಾಡುವುದಕ್ಕಾಗುವುದಿಲ್ಲ. ಸಮುದ್ರಕ್ಕಿಂತಲೂ ಆಳವಾದ ವಿಚಾರವನ್ನು ಮಾಡಬೇಕು ಎಂದು ಹೇಳಿದ್ದಾರೆ. ಒಂದು ವರ್ಷವಲ್ಲ, ಎರಡು ವರ್ಷವಲ್ಲ, 1947ನೇ ವರ್ಷದಿಂದ ಅಂದರೆ ನಮ್ಮಾರು 20 ವರ್ಷವಾಗುತ್ತಾ ಬಂತು. 20 ವರ್ಷದಲ್ಲಿ ಎಷ್ಟು ಜನ ಶಾಸಕರುಗಳು, ಎಷ್ಟು ಜನ ಕಾರ್ಪೊರೇಷನ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಮಂತ್ರಿಗಳು, ಉಪಮಂತ್ರಿ ಗಳು, ಹೀಗೆ ಲೆಕ್ಕ ಹಾಕುತ್ತಾ ಹೋದರೆ ಏಷ್ಟಾತಿ ಒಟ್ಟು ದೇಶಕ್ಕೆ ತೆಗೆದುಕೊಂಡರೆ 10 ಸಾವಿರ ಜನಕ್ಕಿಂತ ಕಡಿಮೆಯಾಗುವುದಿಲ್ಲ. ನಮ್ಮಲ್ಲೇ ತೆಗೆದುಕೊಂಡರೆ 500—600 ಜನರಾಗುತ್ತಾರೆ. ಇವರುಗಳ ವಿಚಾರದಲ್ಲಿ ವಿಚಾರ ಮಾಡುವುದಕ್ಕೆ ಕಮೀಷನ್ ನೇಮಕ ಮಾಡಿದರೆ ಅವರಿಗೆ ವಿಚಾರ ಮಾಡಲು 20 ವರ್ಷವಾಸೀತೆಂದು ಕಾಣುತ್ತದೆ. ಯಾರು ಯಾರಿಗೆ ಏನೇನು ಹಣ್ಣುಭಾಧ್ಯತೆಗಳು ಇವೆಯೋ ಅವನ್ನು ಲೆಕ್ಕಾಚಾರ ಮಾಡಬೇಕೆಂದರೆ, ಬಂದಿಕ ಆಗತಕ್ಕಂಥ ಮಾತಲ್ಲ. ಲಂಚರುಷುವತ್ತು ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಅನೇಕ ಕಡೆಗಳಲ್ಲಿ ಹೇಳಿದ್ದೇನೆ. ಲಂಚರುಷುವತ್ತುಗಳು ಇವತ್ತು ಇದೆಯೆಂದು ಜನಗಳಿಗೆ ಗೊತ್ತಾಗುತ್ತಿದೆ. ಆದರೆ ಪೂರ್ವ ಕಾಲದಲ್ಲಿಯೂ ಇದು ಪ್ರಾಮುಖ್ಯವಾಗಿತ್ತು. ಎಲ್ಲೆಲ್ಲೂ ನಡೆಯುತ್ತಿತ್ತು. ಜನರು ಇದನ್ನು ಸ್ವಾಭಾವಿಕವಾಗಿ ನಡೆಯತಕ್ಕ ಮಾರ್ಗವೆಂದು ಒಪ್ಪಿಕೊಂಡಿದ್ದರು. ಸಾಮಾನ್ಯ ಜೀವನ ಪದ್ಧತಿ ಯಲ್ಲಿ ಇದು ಒಂದು ಭಾಗವಾಗಿತ್ತು. ಮತ್ತು ಆ ಕಾಲದ ಅಧಿಕಾರಿಗಳು ಹಾಗೆ ತೆಗೆದುಕೊಳ್ಳು ವುದು ನಡಿಯೆಂದು ತಿಳಿದುಕೊಂಡಿದ್ದರು. ತಮ್ಮ ಮಗನಿಗೆ ಅಮಲ್ದಾರ್ ಕೆಲಸವಾಗುತ್ತಿದೆ ಯೆಂದರೆ ಅವರು ಸಂಬಳ ಕೇಳುತ್ತಿರಲಿಲ್ಲ, ಮೇಲೆ ಎಷ್ಟು ಬರುತ್ತದೆಯೆಂದು ಕೇಳುತ್ತಿದ್ದರು. ನಾನು ಚಿಕ್ಕ ಹುಡುಗನಾಗಿದ್ದಾಗ ಇದ್ದವಾತು ಇದು. ಇವತ್ತು ಯಾರೂ ತೆಗೆದುಕೊಳ್ಳುವುದಿಲ್ಲ ವೆಂದು ಹೇಳುವುದಿಲ್ಲ; ತೆಗೆದುಕೊಳ್ಳುತ್ತಾರೆ. ಜನತಾ ಪ್ರತಿನಿಧಿಗಳಾದ ಶ್ರೀಮಾನ್ ಕೇಶವ ಮೂರ್ತಿಯವರು ಮಾತ್ರವಲ್ಲ. ಎಲ್ಲಾ ಸದಸ್ಯರ ಗಮನಕ್ಕೂ ಈ ವಿಚಾರ ಬಂದಿದೆ. ಇದು ಒಂದು ಉತ್ತಮವಾದ ರೀತಿಯಲ್ಲಿ ನಡೆಯುತ್ತಿದೆಯೆಂದು, ಕೆಲವು ಜನ ಶ್ರೀಮಂತರಾಗಿದ್ದಾರೆಂದು ಹೇಳಿರುವ ಮಾತು ಒಂದು ರಾಜಕೀಯ ಪಕ್ಷ ಅಥವಾ ಬೇರೆ ಒಂದು ರಾಜಕೀಯ ಪಕ್ಷಕ್ಕೆ ಸೇರಿದೆ ಎಂದು ಹೇಳುವುದಿಲ್ಲ. ಸಮಯವನ್ನು ಉಪಯೋಗಿಸಿಕೊಂಡು ಕೆಲವರು ಶ್ರೀಮಂತರಾಗಿದ್ದಾರೆ. ಕೆಲವರು ತಮ್ಮ ಸ್ಥಾನವನ್ನು ದುರುಪಯೋಗಮಾಡಿಕೊಂಡಿದ್ದಾರೆ.

(ಶ್ರೀ ಎಸ್. ನಿಜಲಿಂಗಪ್ಪ)

10-00 A. M.

ಗರೀಬರಾಗಿದ್ದವರು ಶ್ರೀಮಂತರಾಗಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಅವರ ಸಂಖ್ಯೆ ಬಹಳ ಕಡಿಮೆ. ಇದು ಒಂದು ರೀತಿಯಾದರೆ ಮತ್ತೊಂದು ರೀತಿಯಲ್ಲಿ ರಾಜಕೀಯಕ್ಕೆ ಉಪಯೋಗವಾಗುತ್ತದೆ. ತಿಳಿದೂ ತಿಳಿಯದಂತೆ ಮಾಡಬೇಕಾದ ಕರ್ತವ್ಯವೆಂದು ಹೇಳಿ ಸಿಕ್ಕಾಪಟ್ಟೆ ದೂರುಗಳನ್ನು ಕೊಡತಕ್ಕವರು ಕೆಲವರಿದ್ದಾರೆ. ಕೆಲವರು ಇದನ್ನು ಹೇಳದೆ ಇದ್ದರೆ ಕರ್ತವ್ಯ ಲೋಪವಾಗುತ್ತದೆ ಎಂದು ಊಹೆ ಮಾಡಿಕೊಂಡು ಹೇಳತಕ್ಕವರೂ ಇದ್ದಾರೆ. ಹೀಗೆ ಇದರ ನತ್ಯಾಂಶವನ್ನು ಹುಡುಕುವುದಕ್ಕೆ ಕಷ್ಟವಾಗುತ್ತದೆ. ಬಣವೆಯಲ್ಲಿ ಸೂಜಿ ಹುಡುಕಿದಂತೆ ಆಗುತ್ತದೆ. ಮಾನ್ಯ ಸದಸ್ಯರು ಈ ನಥೆಯಲ್ಲಿ ಸ್ಪಷ್ಟವಾಗಿ ಈ ರೀತಿ ನಡೆದಿದೆ ಎಂದು ಹೇಳಿದರೆ ಅದನ್ನು ವಿಚಾರ ಮಾಡಬಹುದು. ಅದಕ್ಕೆ ಬದಲು 20 ವರ್ಷಗಳ ಹಿಂದೆ ಬಂದಿರತಕ್ಕಂಥ ಸಹಸ್ರಾರು ವಿಚಾರ ಗಳನ್ನು ವಿಚಾರಿಸುವುದಕ್ಕೋಸ್ಕರ ಒಂದು ಕಮಿಶನ್ ನೇಮಕ ಮಾಡಬೇಕೆಂದು ಹೇಳಿದರೆ ಅದು ನರ್ವಥಾ ಒಪ್ಪತಕ್ಕದ್ದಲ್ಲ. ಒಂದು ವೇಳೆ ಸ್ಪಷ್ಟವಾದ ನಂದರ್ಭಗಳು ಏನಾದರೂ ಇದ್ದರೆ ವಿಚಾರ ಮಾಡಬಹುದು. ನನ್ನ ಪಕ್ಷದ ಪರವಾಗಿ ಹೇಳುವುದಾದರೆ, ಪ್ರತಿ ವರ್ಷ ಪ್ರತಿಯೊಬ್ಬ ಸದಸ್ಯರೂ ಏಪ್ರಿಲ್ ಕೊನೆಯೊಳಗೆ ತನ್ನ ಆಸ್ತಿಪಾಸ್ತಿಗಳ ವಿಚಾರದಲ್ಲಿ ಒಂದು ಪಟ್ಟಿಯನ್ನು ಕಳುಹಿಸಬೇಕು. ನಾವು ಅದನ್ನು ನಮ್ಮ ಪಕ್ಷದ ಕೇಂದ್ರ ಕಛೇರಿಗೆ ಕಳುಹಿಸುತ್ತೇವೆ. ಅವರಿಗೆ ಏನಾದರೂ ಅನುಮಾನ ಬಂದರೆ ಅದನ್ನು ವಿಚಾರಮಾಡುತ್ತಾರೆ. ಇತರ ಪಕ್ಷಗಳಲ್ಲಿ ಈ ಪದ್ಧತಿ ಇದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ. ವಿಚಾರ ಮಾಡುವಾಗ ಏನಾದರೂ ತಪ್ಪು ಕಂಡುಬಂದರೆ ಅವರಿಗೆ ತಕ್ಕ ಶಿಕ್ಷೆಯಾಗುತ್ತದೆ. ಕೆಲವರಿಗೆ ಶಿಕ್ಷೆ ಆಗಿದೆ. ಕೆಲವರನ್ನು ಅಧಿಕಾರದಿಂದ ಬಿಟ್ಟು ಹೋಗಿ ಎಂದು ಹೇಳಿದ್ದಾರೆ.

ನಂತಾನಮ್ ಕಮಿಟಿ ರಿಪೋರ್ಟ್ ಇದೆ. 10 ಜನ ರುಜು ಮಾಡಿದ್ದಾರೆ. 10 ಜನ ರುಜು ಮಾಡಲು ಯಾರಾದರೂ ಸಿಕ್ಕುತ್ತಾರೆ. ಅದೇನೂ ದೊಡ್ಡ ಕಷ್ಟವಲ್ಲ. ಏನಾದರೂ ಆರ್ಡಿಬಂದರೆ ಅದನ್ನು ತಿಳಿದುಕೊಳ್ಳದೇನೇ ರುಜು ಮಾಡುವವರು ಕೆಲವರು ಇದ್ದಾರೆ. ನನ್ನ ಮತ್ತು ನನ್ನ ನಹೋದ್ಯೋಗಿಗಳ ಮೇಲೆ ಆರ್ಡಿ ಬಂದಿದೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದರೆ ಅದರಲ್ಲಿ ಏನೂ ನತ್ಯಾಂಶವೇ ಇರಲಿಲ್ಲ. ಆ ಬಗ್ಗೆ ಒಂದು ವರದಿಯನ್ನು ಕೇಂದ್ರ ನರ್ಕಾರಕ್ಕೆ ಕಳುಹಿಸಿಯೂ ಆಯ್ತು. ಆ ರೀತಿ ಮಾಡಿರತಕ್ಕ ಅಪಾದನೆಗಳು ಏನಿವೆ, ದೂರುಗಳು ಏನಿವೆ, ಅವುಗಳಲ್ಲಿ ಅಕ್ಷರಶಃ ಏನೂ ನತ್ಯಾಂಶವಿಲ್ಲ ಎಂದು ತಿಳಿನಬೇಕಾಗಿ ಬಂತು. ಆದರೆ ಹತ್ತು ಜನ ರುಜು ಮಾಡಿದ ತಕ್ಷಣ ಅದರಲ್ಲಿ ನತ್ಯಾಂಶವಿದೆ ಎಂದು ಹೇಳುವುದು ಸರಿಯಲ್ಲ. ಇದು ವಿಚಾರ ವಿಲ್ಲದೆ, ನಾಕಷ್ಟು ಅನುಭವವಿಲ್ಲದೆ, ರಾಜಕೀಯದಲ್ಲಿ ಹೇಳತಕ್ಕಂತಹ ಮಾತುಗಳು. ಆಕಾಶದಲ್ಲಿ ತೇರಾಡತಕ್ಕವರು ಭೂಮಿಗೆ ಬರುವುದಿಲ್ಲ. ಇದೆಲ್ಲಾ ವಿಚಾರ ತಿಳಿದುಕೊಂಡು ನಾಕಷ್ಟು ಅನುಭವ ದಿಂದ ಹೇಳತಕ್ಕ ಮಾತಲ್ಲ. ಆದರೆ ಶ್ರೀಮಾನ್ ಕೇಶವ ಮೂರ್ತಿಯವರ ಅಂತಃಕರಣ ನನಗೆ ಗೊತ್ತು, ಅವರು ಬಹಳ ಒಳ್ಳೆಯ ಮನುಷ್ಯರು. ಪ್ರಾಮಾಣಿಕತೆಯಿಂದ ದುಡಿಯತಕ್ಕ ಮನುಷ್ಯರು. ಆದರೆ ಅವರು ಆಕಾಶದಲ್ಲಿ ಇರುತ್ತಾರೆ, ನೆಲಕ್ಕೆ ಬರಲಿಲ್ಲ. ಅದೇ ಸ್ವಲ್ಪ ಕೊಂದರೆ. ಆದರೆ ಅವರು ತಂದಿರತಕ್ಕಂತಹ ನಿರ್ಣಯ ಏನಿದೆ, ಅದರ ಅಭಿಪ್ರಾಯ ಏನಿದೆ, ಆ ರೀತಿ ಜನಜೀವನದಲ್ಲಿ, ಜನ ನಾಮಾನ್ಯರಲ್ಲಿ, ಅದರಲ್ಲೂ ಹೆಚ್ಚಿಗೆ ದೊಡ್ಡವರಲ್ಲಿ, ರಾಷ್ಟ್ರದಲ್ಲಿ, ನಮಾಜದಲ್ಲಿ, ಯಾವುದೇ ರೀತಿಯ ಕೊಳಕು ಇರಬಾರದು, ಅದನ್ನು ತೆಗೆಯಬೇಕೆಂದು ನರ್ವ ರೀತಿಯ ಪ್ರಯತ್ನ ಮಾಡ ಬೇಕೆಂದು, ಏನು ಅವರು ಕಳಕಳಿಯಿಂದ ಹೇಳುತ್ತಾರೆ, ಅದಕ್ಕೋಸ್ಕರ ಏನು ಒಂದು ನಿರ್ಣಯವನ್ನು ಈ ನಥೆಯಲ್ಲಿ ತಂದಿದ್ದಾರೆ, ಅದನ್ನು ನಾನೂ ಅಷ್ಟೇ ಕಳಕಳಿಯಿಂದ ಒಪ್ಪಿಕೊಳ್ಳುತ್ತೇನೆ. ಆದರೆ ಈ ಮಾರ್ಗ ನರಿಯಲ್ಲ. ಇದಕ್ಕೆ ಕೊನೆಯಿಲ್ಲ, ಇದು ಮುಗಿಯುವುದಿಲ್ಲ. ಅವರು ಈ ರೀತಿ ತರದೆ, ಸ್ಪಷ್ಟವಾದ ಕೆಲವು ಕೇಸುಗಳನ್ನು ಹೇಳಿದ್ದರೆ ಸರಿಯಾಗುತ್ತಿತ್ತು. ಮಾನ್ಯ ಸದಸ್ಯರು ಹೇಳಿದರು, ಅಧಿಕಾರ ದುರುಪಯೋಗ ಮಾಡುತ್ತಾರೆಂದು. ಅಧಿಕಾರ ದುರುಪಯೋಗ ಮಾಡಲಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಆ ರೀತಿ ಮಾಡಿದ್ದಾರೆ. ಇದು ನಮ್ಮ ರಾಜ್ಯಕ್ಕೆ ಮಾತ್ರ ನಂಬಂಧಪಟ್ಟದ್ದೇನಲ್ಲ. ಅನೇಕ ಕಡೆಗಳಲ್ಲಿ ಈ ರೀತಿ ಇದೆ. ಇಲ್ಲಿಯೂ ಇರಬಹುದು. ಹಾಗೇ ಏನಾದರೂ ಇದ್ದರೆ ವಿಚಾರಣೆ ಮಾಡಬಹುದು. ಅವಕಾಶ ಕಲ್ಪಿಸಬಹುದು. ಆದರೆ ಈ ರೀತಿ ತಂದಿರತಕ್ಕ ನಿರ್ಣಯ ಏನಿದೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ. It is impracticable and impossible. ಇದನ್ನು ಕಾರ್ಯರೂಪಕ್ಕೆ ತರುವಂತದ್ದು ನಾಧ್ಯ ಮತ್ತು ನಂಭವ. ಇದನ್ನು

ನಾನು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ಬಹುತಃ ಈ ಸಭೆಯು ತಿರಸ್ಕಾರ ಮಾಡಬೇಕೆಂದು ನಾನು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಅವರ ನಿರ್ಣಯವನ್ನು ಪಾಪನ್ನು ತೆಗೆದುಕೊಂಡರೆ ಸಂತೋಷ, ಇಲ್ಲದಿದ್ದರೆ ಅದು ಈ ಸಭೆಗೆ ಬಿಟ್ಟದ್ದು.

†ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಮುಖ್ಯ ಮಂತ್ರಿಗಳು ಈಗ ಒಂದು ಹೇಳಿಕೆಯನ್ನು ಕೊಟ್ಟರು. ಆದರೆ, ನನ್ನ ಒಂದೇ ಒಂದು ಉತ್ತರ ಇಷ್ಟೆ. "Where there is a will, there is a way" ಸಾಮಾನ್ಯವಾಗಿ ಮನುಷ್ಯನಿಗೆ ಅಸಾಧ್ಯ ಎಂಬುದು ಯಾವುದೂ ಇಲ್ಲ. ನನ್ನ ಮುಖ್ಯ ಅಭಿಪ್ರಾಯವೇನೆಂದರೆ, ಈಗ ಮುಖ್ಯ ಸ್ಥಾನದಲ್ಲಿರತಕ್ಕಂತಹ ಸ್ವಾರ್ಥ ಸಾಧಕರನ್ನು ಸತ್ಯವಂತರಿಂದ ದೂರ ಮಾಡಬೇಕಾದಂತಹದು. ನಮ್ಮ ದೇಶದಲ್ಲಿ ಇವತ್ತಿನ ದಿವಸ ಸತ್ಯವಂತರು ಯಾರು, ಸ್ವಾರ್ಥ ಸಾಧಕರು ಯಾರು ಎಂಬುದನ್ನು ಪೆಮರ್ಕೆ ಮಾಡತಕ್ಕಂತಹ ಒಂದು ಅಳತೆಗೋಲು ಇಲ್ಲವಾಗಿದೆ. ಇವರ ಇಬ್ಬರ ಮಧ್ಯೆ ಒಂದು ನಿರ್ದಿಷ್ಟವಾದ ಗೆರೆ 'ಡಿಮಾರ್ಕೇಟಿಂಗ್ ಲೈನ್' ಎಳೆಯಬೇಕಾದುದು ಕೇವಲ ಅಗತ್ಯವೆಂದು ನಾನು ಭಾವಿಸಿದ್ದೇನೆ. ಇವತ್ತಿನ ದಿವಸ ಪ್ರಜಾಪ್ರಭುತ್ವ ಬೆಳೆಯಬೇಕಾದರೆ, ಸತ್ಯವಂತರ ಸಂಖ್ಯೆ ಜಾಸ್ತಿಯಾಗಿದ್ದ ಪಕ್ಷದಲ್ಲಿ ಮಾತ್ರ ಸಾಧ್ಯ. ಇಲ್ಲದೆ ಹೋದರೆ ನಮ್ಮ ದೇಶದ ಸ್ಥಿತಿಗತಿ ಏನಾಗುತ್ತದೆಂಬುದನ್ನು ತಾವು ಆರೋಚನೆ ಮಾಡಬೇಕಾಗುತ್ತದೆ. ಇವತ್ತು ಆ ಉನ್ನತ ಸ್ಥಾನದಲ್ಲಿರತಕ್ಕಂತಹ ಸ್ವಾರ್ಥಿಯು ದೇಶದ ಶತ್ರು ಎಂದು ನಾವು ಭಾವಿಸಬೇಕಾಗುತ್ತದೆ. ಸಾಮಾನ್ಯವಾಗಿ ಬೇರೆ ಕಮಿಷನರ್ಸ್‌ಗಿಂತಲೂ ಇವನು ಹೀನ ತರಗತಿಯವನಾಗಿದ್ದಾನೆಂದು ನಾವು ತಿಳಿಯಬೇಕಾಗುತ್ತದೆ. ಅಂತಹವರಿಗೆ ಏಕೆ ಪ್ರಜಾಪ್ರಭುತ್ವದಲ್ಲಿ ಗೌರವವನ್ನು ಸಲ್ಲಿಸಬೇಕು ? ಅವರು ಮಾಡಿರತಕ್ಕ ಕೊಳಕು ಅಥವಾ ಪಾಪದ ಕೃತ್ಯಗಳನ್ನು ದೇಶದ ಮುಂದೆ ಬಯಲಿಗೆ ಎಳೆದು ಮುಂದೆ ಅವರು ಅಂತಹ ಕೃತ್ಯಗಳನ್ನು ಮಾಡದ ಹಾಗೆ, ನಡೆಯದ ಹಾಗೆ, ಮಾಡುವುದಕ್ಕೆ ಒಂದು ದಾರಿಯನ್ನು ಹುಡುಕಬೇಕಾಗುತ್ತದೆ. ಉದಾಹರಣೆಗೆ ನಮ್ಮ ದೇಶದಲ್ಲಿ ಮಾಡಿದ ಮಹಾ ಪಾಪಗಳಿಗೆ ವಾರನ್ ಹೇಸ್ಟಿಂಗ್ಸ್‌ನನ್ನು ಬ್ರಿಟಿಷ್ ಪಾರ್ಲಮೆಂಟಿನಲ್ಲಿ ಇಂಪೀಚ್ ಮಾಡಿರುವುದನ್ನು—ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಈ ಪ್ರಜಾಪ್ರಭುತ್ವದಲ್ಲಿ ಅನ್ಯಾಯ, ಅಧರ್ಮ, ಅನಾಚಾರ ಇತ್ಯಾದಿಗಳನ್ನು ಮಾಡತಕ್ಕಂತಹ ಜನಗಳನ್ನು ಮೇಲೆ ಕೂರಿಸಿಕೊಂಡು ಅವರಿಗೆ, ಪ್ರೋತ್ಸಾಹ ಕೊಟ್ಟುಕೊಂಡು, ಸತ್ಯವಂತರಿಗೂ ಅವರಿಗೂ ಯಾವ ವ್ಯತ್ಯಾಸವಿಲ್ಲವೆಂದು ಬಾಹ್ಯ ಪ್ರಪಂಚಕ್ಕೆ ತೋರಿಸುತ್ತಾ ಇರುವುದು ನಮ್ಮ ಧರ್ಮ ವಲ್ಲವೆಂದು ನಾನು ಹೇಳುತ್ತೇನೆ. ಇವತ್ತು ನಮ್ಮ ಭಾರತ ದೇಶದಲ್ಲಿ, ನಮ್ಮ ಮುಖ್ಯ ಮಂತ್ರಿಗಳು ಅನೇಕ ವರ್ಷಗಳಿಂದಲೂ ಒಬ್ಬ ಐಡಿಯಲಿಸ್ಟಿಕ್ ವ್ಯಕ್ತಿಯಾಗಿದ್ದಾರೆ. ಅವರು ವಿದ್ಯಾವಂತರು, ನ್ಯಾಯವಂತರು, ಅವರಿಗೆ ಎಲ್ಲಾ ವಿಧದಿಂದಲೂ ಅನುಭವವಿದೆ, ಎಲ್ಲಾ ಇದೆ. ಅವರ ವಿಷಯ ಬೇರೆ ಹೆಚ್ಚೀನೂ ಹೇಳಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ಅವರು ಇಂತಹ ಒಂದು ಕಮಿಶನನ್ನು ಏರ್ಪಾಡು ಮಾಡಿ ಇಡೀ ಇಂಡಿಯಾ ದೇಶಕ್ಕೇ ಒಂದು ಮಾರ್ಗದರ್ಶಕವಾಗಬೇಕೆಂದು ನಾನು ಅವರಲ್ಲಿ ಕೇಳಿ ಕೊಳ್ಳುತ್ತೇನೆ. ಆದರೆ ಅವರು ಅಸಾಧ್ಯ ಎಂಬು ಹೇಳುತ್ತಾರೆ. ಮನುಷ್ಯನಿಗೆ ಪ್ರಯತ್ನ ಮಾಡಿದರೆ ಯಾವುದೂ ಅಸಾಧ್ಯವಿಲ್ಲವೆಂಬುದನ್ನು ನಾನು ಹೇಳಬೆ ವಿಧಿಯಿಲ್ಲ. ಇವತ್ತು ನಾವು ನೋಡುತ್ತಿದ್ದೇವೆ, ಯುರೋಪ್ ರಾಷ್ಟ್ರಗಳಲ್ಲಿ ಓಮ್‌ಬುಡ್ಸ್‌ಮನ್ ಕಾನೂನಿನ ಪ್ರಕಾರ ಅವರು ಯಾವ ಸಾರ್ವಜನಿಕರೇ ಆಗಿರಲಿ ಅವರು ತಪ್ಪು ದಾರಿಯಲ್ಲಿ ಹೋದರೆ, ತಪ್ಪು ದಾರಿಯನ್ನು ಕಂಡು ಹಿಡಿದು ಶಿಕ್ಷಿಸತಕ್ಕ ಕಾನೂನನ್ನು ಕಂಡುಹಿಡಿದಿದ್ದಾರೆ. ಆದರೆ ನಮ್ಮ ದೇಶದಲ್ಲಿ ಏನೋ ಒಂದು ಎಜಿರೆನ್ಸ್ ಕಮಿಷನ್ ನೇಮಕಮಾಡಿದ್ದಾರೆ, ಅವರು ಸರ್ಕಾರಿ ನೌಕರರನ್ನು ಮಾತ್ರ ಶಿಕ್ಷೆಗೆ ಒಳಪಡಿಸುತ್ತಾರೆಯೇ ವಿನಹ ಸರ್ಕಾರದ ಹತೋಟಿ ಇಲ್ಲದ ಮುಖ್ಯವಾದ ಜನರನ್ನು ಹುಡುಕಿ ಶಿಕ್ಷೆ ಮಾಡುವುದಕ್ಕೆ ಅವರಿಗೆ ಯಾವ ಅಧಿಕಾರವಿದೆ ? ಇದನ್ನೆಲ್ಲಾ ಬೆಳೆಯುವುದಕ್ಕೆ ಬಿಟ್ಟರೆ ಮತ್ಸ್ಯ ನ್ಯಾಯ ವಾದಂತೆ—ಸಣ್ಣ ಮೀನು ದೊಡ್ಡ ಮೀನನ್ನು ತಿನ್ನುವಂತಾಗಿ, ತಿಮಿಂಗಿಲವಾದ ಹಾಗೆ ಆಗುತ್ತದೆ. ಅದೇ ರೀತಿಯಲ್ಲಿ ಇಡೀ ನಮ್ಮ ದೇಶಕ್ಕೆ ಇದೊಂದು ಕಂಟಕಪ್ರಾಯವಾಗಿ ಬೆಳೆಯುತ್ತದೆ ಎಂದು ನಾನು ಇಲ್ಲಿ ಹೇಳಬೇಕಾಗಿದೆ.

ಈ ಪಾಶ್ಚಿಮಾತ್ಯ ದೇಶದಲ್ಲಿ ಈ ತರಹ ಮಾರ್ಗವನ್ನು ಅನುಸರಿಸಿ ಪ್ರಜಾಪ್ರಭುತ್ವವನ್ನು ಕಾಪಾಡುತ್ತಾ ಇರುವಾಗ ನಮ್ಮ ದೇಶದಲ್ಲಿ ಇಂತಹ ಒಂದು ಕಮಿಷನ್ ಆಫ್ ಇನ್‌ಕ್ವಾಯರಿ ಏತಕ್ಕೆ ಮಾಡಬಾರದು ? ನಮ್ಮಲ್ಲಿ ಕಮೀಷನ್ ಆಫ್ ಇನ್‌ಕ್ವಾಯಿರಿ ಆಕ್ಟ್ ಮಾಡಿ ಅವರಿಗೆ ಶಿಕ್ಷೆ ಮಾಡಬೇಕು ಎಂದು ಹೇಳುವುದಿಲ್ಲ. ಇಂತಹ ದೊಡ್ಡ ಮನುಷ್ಯರು ಇದ್ದಾರೆ. ಹಂಸಕ್ಷೀರ ನ್ಯಾಯ ದಂತೆ ಹಾಲು ಇದು, ನೀರು ಇದು ಎಂದು ಏತಕ್ಕೆ ತೋರಿಸಬಾರದು ? ವಾರನ್ ಹೇಸ್ಟಿಂಗ್ಸ್ ಗವರ್ನರ್ ಜನರಲ್ ಆಗಿದ್ದರು. ಅವರಿಗೆ ಬೇಕಾದಷ್ಟು ಮರ್ಯಾದೆ ಇತ್ತು, ಗೌರವ ಇತ್ತು, ಅವರು ಉನ್ನತ ಸ್ಥಾನದಲ್ಲಿ ಇದ್ದವರು. ಅಂತಹವರನ್ನೇ ಬ್ರಿಟಿಷ್ ಪಾರ್ಲಮೆಂಟಿನಲ್ಲಿ ಇಂಪೀಚ್

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಮಾಡಲಿಲ್ಲವೇ! ಎಷ್ಟೋ ವರ್ಷದ ಮೇಲೆ ಅವರನ್ನು ಇಲಿಪೀಚ್ ಮಾಡಿದರು. ಸ್ವರಾಜ್ಯ ಬಂದ ಮೇಲೆ, ಇಂತಹ ಬೇಕಾದಷ್ಟು ಜೋಗಸ್ ಜನರು ಇದ್ದು, ದೇಶಕ್ಕೆ ಅನ್ಯಾಯ ಮಾಡಿ, ದೇಶದ್ರೋಹ ಮಾಡಿ, ಸ್ವಾರ್ಥತೆಯಿಂದ ಮೆರೆಯುತ್ತಾ, ಇರತಕ್ಕ ಜನರನ್ನು ಬಯಲಿಗೆ ಎಳೆದರೆ ಏನು ಮಹಾಪರಾಧವಾಗುತ್ತದೆ ಮೊದಲು ಪ್ರಜಾಪ್ರಭುತ್ವ ಇರಲಿಲ್ಲ ಜನಗಳಿಗೆ ನಾಲಗೆ ಇರಲಿಲ್ಲ, ಅವರಿಗೆ ಅವಕಾಶ ಇಲ್ಲದೇ ಇದ್ದುದರಿಂದ ಅವರು ಸುಮ್ಮನೆ ಇದ್ದರು. ಸ್ವರಾಜ್ಯ ಬಂದಮೇಲೆ ಇಂತಹ ಜನಗಳನ್ನು ಬಯಲಿಗೆ ಎಳೆದರೆ ಏನು ಮಹಾಪರಾಧವಾಗುತ್ತದೆ ಎಂದು ಪ್ರಶ್ನೆ ಮಾಡುತ್ತೇನೆ. ಉನ್ನತ ಸ್ಥಾನದಲ್ಲಿದ್ದುಕೊಂಡು ಅನುಕೂಲಗಳನ್ನೂ ಸುಖಸಾಧನಗಳನ್ನು ಕೇವಲ ಕೆಲವರ ಸ್ವತ್ತಾಗಿ ಮಾಡಿಕೊಂಡರೆ, ಬೇರೆಯವರು ಎಲ್ಲಿಗೆ ಹೋಗಬೇಕು ? ನಮ್ಮ ದೇಶದಲ್ಲಿ ಬಡತನ ತಾಂಡವವಾಡುತ್ತಾ ಇರುವಾಗ ಕೆಲವರು ಸುಖಲೋಲುಪ್ತರಾಗಿ ವರ್ತಿಸಿದರೆ ನಾವು ಸುಮ್ಮನೆ ಇರಬೇಕೇ ? ಬಡವರ ಗೋಳು ಇಂತಹವರಿಗೆ ತಟ್ಟುವುದಿಲ್ಲವೇ ? ಇಂತಹವರಿಗೆ ದೇವರು ಇಲ್ಲ, ಬಡವರೂ ಇಲ್ಲ ಸ್ವಾರ್ಥ ಸಾಧನೆಯೇ ಅವರ ಮುಖ್ಯ ಗುರಿಯಾಗಿರುವಾಗ ಪ್ರಜಾಪ್ರಭುತ್ವದಲ್ಲಿ ಇದನ್ನೆಲ್ಲಾ ನೋಡಿಕೊಂಡು, ಸಹಿಸಿಕೊಂಡು ಕುಳಿತಿರುವುದು ಸರಿಯೇ, ಎಂದು ನಾನು ಅವರಿಗೆ ಪ್ರಶ್ನೆ ಮಾಡುತ್ತೇನೆ.

ಇವೊತ್ತಿನ ದಿವನ ಪ್ರಜಾಪ್ರಭುತ್ವದಲ್ಲಿ ಮುಖ್ಯ ಮಂತ್ರಿಗಳಿಗೆ ಆಳತಕ್ಕ ಪಾರ್ಟಿಯವರ ಹೆದರಿಕೆ ಇರಬಹುದು, ಇಂಥಿಂಥ ಸ್ಥಾನದಲ್ಲಿ ಖದೀಮರು ಇರುತ್ತಾರೆ, ಅವರನ್ನು ಕೆಣಕಿದರೆ ಇದೀ ಪಾರ್ಟಿಯೇ ಹಾಳಾಗಬಹುದು, ರೂಲಿಂಗ್ ಪಾರ್ಟಿಯು ಹೋರ್ಡ್ ಹೋಗಬಹುದು ಎನ್ನುವ ಶಂಕೆ ಅವರಲ್ಲಿ ಇರಬಹುದು. ಅದಕ್ಕೆ ನಾನು ಹೇಳುತ್ತೇನೆ. ಯಾರಿಗೂ ಕೂಡ ಯಾವುದೂ ಶಾಶ್ವತ ಅಲ್ಲ, ಇದೇ ಪಾರ್ಟಿಯವರು ಇಂಡಿಯಾ ದೇಶದಲ್ಲಿ ಸಾರೋದ್ಧಾರವಾಗಿ ಆಳುತ್ತಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ವರ್ಷ ಆಳಲಿ, ನಮ್ಮ ದೇಶವನ್ನು ಸತ್ಯವಂತರಾಗಿ ಧರ್ಮದಿಂದ ರಾಜ್ಯಭಾರ ಮಾಡಿದರು ಎನ್ನುವ ಕೀರ್ತಿ ಪಡೆದರೆ ಚರಿತ್ರೆಯಲ್ಲಿ ಯುಗ ಯುಗಾಂತರದಲ್ಲಿ ಅವರ ಹೆಸರು ಇರುತ್ತದೆ. ಹೆಸರು ಮುಖ್ಯವೇ ಹೊರತು ಆಳತಕ್ಕಂಥ ಕಾಲ ಮುಖ್ಯವಲ್ಲ. ಇದನ್ನು ಗಮನಿಸಬೇಕು. ಸಾರೋದ್ಧಾರವಾಗಿ ಆಳಬೇಕೆಂದು ಇಂತಹ ಜನರನ್ನು ಬಿಟ್ಟುಕೊಂಡು ಬಂದರೆ, ಈ ದೇಶವನ್ನು ತಾವೇ ಅವನತಿ ಸ್ಥಿತಿಗೆ ತಂದ ಹಾಗಾಗುತ್ತದೆ. ಕೆಟ್ಟ ಉದಾಹರಣೆಯನ್ನು ಕೊಟ್ಟಂತಾಗುತ್ತದೆ ಎಂದು ಅವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಸಾಮಾನ್ಯವಾಗಿ ಅವರಿಗೆ ಗೊತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಮತ್ತು ಪಟ್ಟಣಗಳಲ್ಲೂ ಸಹ ಸಾಮಾನ್ಯ ಜೀವನ ಯಾವ ಮಟ್ಟದಲ್ಲಿ ಇದೆ, ಅವರಿಗೆ ಅನುಕೂಲಗಳು ಏನು ಇವೆ, ಪ್ರಜಾಪ್ರಭುತ್ವದಲ್ಲಿ ಮುಖ್ಯವಾಗಿ ಸ್ಥಾನಗಳಿಗೆ ಬರಬೇಕಾದರೆ ಹೇಗೆ ಬರುತ್ತಾರೆ, ಜನರು ಕೊನೆಗೆ ಸ್ಥಾನ ಬಿಟ್ಟು ಹೋಗಬೇಕಾದರೆ, ಅದಕ್ಕೆ ಹೇಗೆ ಅಂಟಿಕೊಂಡಿರುತ್ತಾರೆ. ಸ್ಥಾನದಿಂದ ಇಳಿಯುವುದಕ್ಕೆ ಹೇಗೆ ಇಷ್ಟಪಡುವುದಿಲ್ಲ ಎಂದು. ಇಂತಹ ಜನಗಳು ಜಾಸ್ತಿ ಇರುವಾಗ ಇಂತಹ ಒಂದು ಕಮ್ಯುನಿಟ್ಯಾಷ್ಟ ಕಾನೂನು ಇಲ್ಲದೇ ಇದ್ದರೆ, ಆಳುವ ಪಾರ್ಟಿಗೆ ಬೇಕಾದ ಶಕ್ತಿ ಹೇಗೆ ಬರುತ್ತದೆ ಎಂದು ನಾನು ಕೇಳುತ್ತೇನೆ. ಇಂತಹ ಕಮೀಷನ್ ಇದ್ದ ಪಕ್ಷದಲ್ಲಿ, ದುಷ್ಟ ಶಕ್ತಿಗಳು ಉನ್ನತ ಸ್ಥಾನಕ್ಕೆ ಏರಿ ಬಿಟ್ಟು ಅವರ ಪ್ರಭಾವ ಬೀರುವುದಕ್ಕೆ ಆಗುವುದಿಲ್ಲ. ನಮ್ಮ ದೇಶ ರಾಮಕೃಷ್ಣರು ಆಳಿದ ದೇಶ. ಧರ್ಮನಿಷ್ಠೆಯನ್ನು ಇಲ್ಲಿ ಅನೂಚಾನವಾಗಿ ಉಳಿಸಿಕೊಂಡು ಬಂದಿದ್ದಾರೆ ಅದನ್ನು ನಮ್ಮ ದೇಶದಲ್ಲಿ ಇನ್ನೂ ಮುಂದುವರಿಸಿಕೊಂಡು ಹೋಗುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಒಂದು ಕಮೀಷನ್ ಏರ್ಪಾಡು ಮಾಡಿ ಇದೀ ಇಂಡಿಯಾ ದೇಶಕ್ಕೆ ಮಾದರಿಯನ್ನು ತೋರಿಸಬೇಕು ಎಂದು ಹೇಳಿ ಮುಖ್ಯ ಮಂತ್ರಿಗಳನ್ನು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ.

Mr. DEPUTY SPEAKER. -The question is :

"That this Assembly recommends to Government to appoint a Commission to assess the moveable and immovable" properties owned after the year 1947 by the Ministers, Ex-Ministers, legislators, Chairman, Ex-Chairman, members and ex-members of the statutory boards and also industrialists and businessmen in the State."

Sri B. BHASKAR SHETTY (Koup).—I press for a division.

Mr. DEPUTY SPEAKER.—The division bell will ring.

(The bell rang for two minutes)

Mr. DEPUTY SPEAKER.—I will again put the Resolution to the vote of the House. The question is :

"That this Assembly recommends to Government to appoint a Commission to assess the movable and immovable properties owned after the year 1947 by the Ministers, Ex-Ministers, legislators, Chairman, Ex-Chairman, members and ex-members of the statutory boards and also industrialists and businessmen in the State."

The result of the Division is : 'Ayes' 21 'Noes 4 1.'

The Resolution was negatived.

Mr. DEPUTY SPEAKER.—The next item on the agenda is Sri V. S. Patil's Resolution.

NON-OFFICIAL RESOLUTION

Re : The border disputes between Mysore and the adjoining States including Maharashtra—(Continued)

Mr. DEPUTY SPEAKER.—The hon'ble Chief Minister will speak.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಈ ವಿಚಾರದಲ್ಲಿ .....

Sri B. R. SUNTHANKAR (Belgaum City).—I request the Hon'ble Chief Minister to speak in English so that we can all understand.

Sri S. NIJALINGAPPA.—My friend from Belgaum knows Kannada as well as I know or even better than me. ಸ್ವಾಮಿ, ಇಲ್ಲಿ ಇತಹಸ್ಯಂಥ ಎಲ್ಲ ಮಾನ್ಯ ಸದಸ್ಯರಿಗೆ ಕನ್ನಡ ಚೆನ್ನಾಗಿ ಬರುತ್ತದೆ. ಕನ್ನಡ ಪ್ರೇತದಲ್ಲದ್ದು ಕೋರ್ಟಿನಲ್ಲಿ ಕನ್ನಡ ಭಾಷೆಯ ಮೂಲಕ ವಾಯಿರುಗಳು ತಮ್ಮ ಸಂಪಾದನೆ ಮಾಡಿಕೊಳ್ಳುತ್ತಿರುವುದರಿಂದ ಅವರು ಈ ರೀತಿ ಪ್ರೇಳುವುದು ನನಗೆ ಅರ್ಥವಾಗುವುದಿಲ್ಲ. ನಾನು ಈಗ ಕನ್ನಡದಲ್ಲಿ ಮಾತನಾಡಬೇಕೆಂದಿದ್ದೇನೆ.

ಸ್ವಾಮಿ, ಮಹಾರಾಷ್ಟ್ರ ಹಾಗೂ ಕರ್ನಾಟಕ ಅರ್ಥಾ ಮೈಸೂರಿನ ನರಹದ್ದಿನ ಪ್ರಶ್ನೆ ಇದು ಬಹುಶಃ ಇವತ್ತಿನ ದಿವಸದಿಂದ ಬಂದುದಲ್ಲ. ಈಗ ಈ ಪ್ರಶ್ನೆ 40—45 ವರ್ಷಗಳಿಂದ ಇದೆ. ಕಳೆದ 45 ವರ್ಷಗಳಿಂದಲೂ ನಮ್ಮ ಸ್ನೇಹಿತರು ಬೆಳಗಾಂ ಅವರಿಗೆ ಹೋಗಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಹಿಂದಕ್ಕೆ ಕಾಂಗ್ರೆಸ್ಸಿನಲ್ಲಿ 1919ನೇ ಇಸವಿಯಲ್ಲಿ ಮಹಾತ್ಮಾ ಗಾಂಧಿಯವರ ಬುದ್ಧಿವಾದದ ಮೇಲೆ ಪ್ರಜಾಪ್ರಭುತ್ವ ದೃಷ್ಟಿಯಿಂದ ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ಭಾಷೆಯ ಆಧಾರದ ಮೇಲೆ ಕಾಂಗ್ರೆಸ್ ಪ್ರದೇಶ ಏರ್ಪಾಡಾಗಬೇಕು ಎಂಬ ಒಂದು ತೀರ್ಮಾನ ವಾಯಿತು. ಈ ತೀರ್ಮಾನವಾದ ಮೇಲೆ ಕೂಡ ಕೆಲವು ವಿಷಾದ ಪ್ರದೇಶಗಳು ಉಳಿದವು. ಈ ನಂದರ್ಭದಲ್ಲಿ ಮಹಾರಾಷ್ಟ್ರದ ಆಗಿನ ವಿಶೇಷ ಮುಖಂಡರಾಗಿದ್ದ ಶ್ರೀಮಾನ್ ಎನ್.ಸಿ. ಕೇಳಕರ್ ಅವರಿಗೆ ಈ ಪ್ರಶ್ನೆ ಪರಿಶೀಲನೆ ಮಾಡುವುದಕ್ಕೆ ಕಾಂಗ್ರೆಸ್ ಸಂಸ್ಥೆಯು ಒಂದು ಆದೇಶ ಕೊಟ್ಟಿತು. ಅವರು ಈ ಬಗ್ಗೆ ಸಾಕಷ್ಟು ವಿಚಾರ ಮಾಡಿ ಬೆಳಗಾಂ ಪ್ರದೇಶವು ಇದು ಕರ್ನಾಟಕಕ್ಕೆ ಸೇರ ತಕ್ಕಂಥಾದ್ದು ಎಂದು ತೀರ್ಮಾನ ಮಾಡಿದರು. ಆದು ಆದನಂತರ ಪುನಃ ಕೆಲವು ಸ್ನೇಹಿತರು ಶ್ರೀಮಾನ್ ಕೇಳಕರ್ ಅವರ ಕಡೆಗೆ ಹೋಗಿದ್ದರು. ಆದರೆ ಅವರಿಗೆ ಮನ್ನಣೆ ಸಿಗಲಿಲ್ಲ. ವರ್ಷಕ್ಕೊಂದು ಸಾರಿ ಆಗುವ ಕಾಂಗ್ರೆಸ್ಸಿನ ಮುಖ ಅಧಿವೇಶನವು 1924ನೇ ಇಸವಿಯಲ್ಲಿ ಬೆಳಗಾಂನಲ್ಲಿ